**ದಿನಾಂಕಃ 22.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ: ಶ್ರೀ. ಸಿ.ಜೆ.ಎಂ. ವಕೀಲರಿಂದಃ-**

ನಿಪಿ.3 ರ ಪಹಣಿ ಸರ್ವೆ ನಂ.83/2 ಎ 1 ರಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿರುವ 2018-19 ನೇ ಸಾಲಿನ ಪಹಣಿ ಪತ್ರಿಕೆಯಾಗಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಸರ್ವೆ ನಂ.83 ರಲ್ಲಿ ನಿಪಿ.3 ರಂತೆ ಒಂದೇ ಆಸ್ತಿ ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯು ಸದರಿ ಆಸ್ತಿಯನ್ನು ಅಂದರೆ ದಾವಾ ಆಸ್ತಿಯನ್ನು 5 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನಿಪಿ.1 ರ ಪಹಣಿಯು 1 ನೇ ಪ್ರತಿವಾದಿಯು 5 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ ನಂತರ 5 ನೇ ಪ್ರತಿವಾದಿಯ ಹೆಸರಿಗೆ ಖಾತೆ ಬಂದಿರುವ ಪಹಣಿ ಪತ್ರಿಕೆಯಾಗಿರುತ್ತದೆ ಎಂದರೆ ಸರಿ.

ನಿಪಿ.9 ರ ಆಕಾರಬಂದಿನಲ್ಲಿ ನನ್ನ ಮತ್ತು 1 ನೇ ಪ್ರತಿವಾದಿಯ ಆಸ್ತಿಯ ಬಗ್ಗೆ ನಮೂದಿಸಲಾಗಿರುತ್ತದೆ ಎಂದರೆ ಸರಿ. ಸರ್ವೆ ನಂ.83 ರಲ್ಲಿ ನಿಪಿ.9 ರ ಆಕಾರಬಂದಿನಲ್ಲಿ ನಮೂದಿಸಿರುವಂತೆ ಆಸ್ತಿಗಳು ಇರುತ್ತವೆ ಎಂದರೆ ಸರಿ. ಅದೇ ರೀತಿ ನಿಪಿ.10 ನಕಾಶೆಯಲ್ಲಿ ನಮೂದಿಸಿರುವಂತೆ 1 ನೇ ಪ್ರತಿವಾದಿಯ ಹೆಸರಿಗೆ ಸರ್ವೆ ನಂ.83/2 ಎಂಬುದಾಗಿದ್ದು ಅದನ್ನು ಸಬ್ ನಂ.2 ರ ಬದಲಾಗಿ 4 ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಅದೇ ರೀತಿ ಸರ್ವೆ ನಂ.83 ರಲ್ಲಿ 83/1 ಮತ್ತು 83/3 ನಂಬರುಗಳಿದಂತಹವುಗಳು ಸಬ್ ನಂಬರುಗಳು 1 ಮತ್ತು 5 ಎಂದು ಬದಲಾವಣೆಯಾಗಿರುತ್ತದೆ ಎಂದರೆ ಸರಿ. ನಿಪಿ.9 ರ ಆಕಾರಬಂದ್ ಆಗಲಿ, ನಿಪಿ.10 ರ ಹದ್ದುಬಸ್ತು ನಕಾಶೆಯನ್ನಾಗಲಿ ನಾನು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ.

ನಿಪಿ.10 ರಲ್ಲಿ 1 ನೇ ಪ್ರತಿವಾದಿಯ ಸರ್ವೆ ನಂ.83/4 ರ ಆಸ್ತಿಯು ಎಲ್ಲಿ ಬರುತ್ತದೆ ಎಂದು ನಿಪಿ.10 ರ ಹಿಂಬದಿಯ ನಕಾಶೆಯಲ್ಲಿ ಪ್ರತ್ಯೇಕವಾಗಿ ತೋರಿಸಲಾಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ರಸ್ತೆಯೆಂದು ದಕ್ಷಿಣದ ಕಡೆ ತೋರಿಸಿರುವುದು ಕಡೂರು ಮತ್ತು ಪಂಚನಹಳ್ಳಿ ಮುಖ್ಯ ರಸ್ತೆಯಾಗಿರುತ್ತದೆ. ಸದರಿ ರಸ್ತೆಯು ಸುಮಾರು

100 ವರ್ಷಗಳ ಹಿಂದಿನಿಂದಲೂ ಇರುತ್ತದೆ ಎಂದರೆ ಸರಿ.

ಅದೇ ರೀತಿ ನಿಪಿ.18 ರಿಂದ 20 ರವರೆಗೆ ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳು ಸರ್ವೆ ನಂ.83/1 ಪಿ ಎಂದು ನಮೂದಿಸಿದ್ದು ಸದರಿ ಆಸ್ತಿಯು ನನಗೆ ಸೇರಿದ್ದಾಗಿರುತ್ತದೆ ಎಂದರೆ ಸರಿ. ಸದರಿ ನನ್ನ ಆಸ್ತಿಯು ನಿಪಿ.21 ರಂತೆ ಸರ್ವೆ ನಂ.83/1 ಪಿ3 ಎಂದು ಬದಲಾವಣೆಯಾಗಿರುತ್ತದೆ ಎಂದರೆ ಸರಿ. ಅದೇ ರೀತಿ ನಿಪಿ.22 ರ ಪಹಣಿ ಪತ್ರಿಕೆಯಂತೆ ನನ್ನ ಆಸ್ತಿಯು ಸರ್ವೆ ನಂ.83/1 ಪಿ3 ಯಿಂದ 83/2 ಎ 1 ಎಂದು ಬದಲಾವಣೆಯಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಇತ್ತೀಚೆಗೆ ಬದಲಾವಣೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ ನಿಪಿ.29 ರ ಪಹಣಿ ಪತ್ರಿಕೆಯಲ್ಲಿ ಸರ್ವೆ ನಂ.83/2 ಎ ರಲ್ಲಿ ಹಾಲಿ ಟಿ.ಬಿ.ಮಂಜುನಾಥ ಬಿನ್ ಬಸವರಾಜು ಎನ್ನುವವರು ಸ್ವಾಧೀನದಲ್ಲಿ ಇರುತ್ತಾರೆ ಎಂದು ತೋರಿಸಲಾಗಿರುತ್ತದೆ ಎಂದರೆ ಸರಿ. ಸದರಿ ಟಿ.ಬಿ. ಮಂಜುನಾಥ ಎಂದರೆ 5 ನೇ ಪ್ರತಿವಾದಿ ಎಂದರೆ ಸರಿ.

1 ನೇ ಪ್ರತಿವಾದಿಯು 5 ನೇ ಪ್ರತಿವಾದಿಗೆ ಬರೆದುಕೊಟ್ಟಿರುವ ನಿಪಿ.33 ರ ಕ್ರಯ ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಕ್ರಯ ಪತ್ರದಲ್ಲಿ ಬರೆದಿರುವುದನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ಕ್ರಯಪತ್ರದಲ್ಲಿ ನಮೂದಿಸಿರುವ ಚಕ್ಕುಬಂದಿ ಸರಿಯಾಗಿರುತ್ತದೆ ಎಂದರೆ, ಸಾಕ್ಷಿಯು ಬದಲಾವಣೆಯಾಗಿರುತ್ತದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಹೆಸರಿಗೆ ಇದ್ದಂತಹ ಆಸ್ತಿಯ ಚಕ್ಕುಬಂದಿಯ ದಾಖಲಾತಿಗಳು ನನ್ನ ಬಳಿ ಇರುತ್ತವೆ. ನಿಪಿ.33 ರ ಕ್ರಯಪತ್ರದಲ್ಲಿ ನಮೂದಿಸಿರುವ ಚಕ್ಕುಬಂದಿಯು ವಾಸ್ತವವಾಗಿ ಇರುವಂತಹ ಚಕ್ಕುಬಂದಿಯನ್ನ ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.33 ರ ಕ್ರಯಪತ್ರದಲ್ಲಿರುವ ಚಕ್ಕುಬಂದಿ, ನಿಪಿ.5 ರಲ್ಲಿರುವ ಚಕ್ಕುಬಂದಿ ಬೇರೆ-ಬೇರೆಯಾಗಿರುತ್ತವೆ ಎಂದರೆ ಸರಿ.

ಬಾಬಾ ಸಾಹೇಬ್ ರವರಿಂದ ನನ್ನ ತಂದೆ ಅದಲು-ಬದಲು ಮಾಡಿಕೊಂಡ ಸ್ವತ್ತಿನ ದಕ್ಷಿಣಕ್ಕೆ ಯಾವುದೇ ರಸ್ತೆ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರದ ಖಂಡಿಕೆ-10 ರಲ್ಲಿ ತಿಳಿಸಿದಂತೆ 5 ನೇ ಪ್ರತಿವಾದಿಯು ನನ್ನ ದಾವಾ ಬಿ ಷೆಡ್ಯೂಲ್ ಸ್ವತ್ತನ್ನು

ದಿನಾಂಕ 15.01.2022 ರಂದು ನನ್ನಿಂದ ಸ್ವಾಧೀನವನ್ನು ತಪ್ಪಿಸಿರುತ್ತಾರೆ ಎಂದು ನಮೂದಿಸಿರುವುದು ಸರಿಯಾಗಿರುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಸರಿಯಾಗಿರುತ್ತದೆ ಎಂದು ನುಡಿಯುತ್ತಾರೆ. ದಿನಾಂಕ 15.01.2022 ರಂದು 5 ನೇ ಪ್ರತಿವಾದಿ, ಅವರ ತಂದೆ ಮತ್ತು ಚಿಕ್ಕಪ್ಪನವರು ಬಂದು ನನ್ನಿಂದ ಸ್ವಾಧೀನವನ್ನು ಬಿಡಿಸಿಕೊಂಡಿರುತ್ತಾರೆ. ಸದರಿ ವಿಚಾರವಾಗಿ ನಾನು ಪೊಲೀಸ್ ಠಾಣೆಗೆ ದೂರನ್ನು ನೀಡಲು ಹೋದಾಗ ಸಿವಿಲ್ ವ್ಯಾಜ್ಯವಾಗಿದ್ದು ಇದನ್ನು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಕಳುಹಿಸಿರುತ್ತಾರೆ. ಸದರಿಯವರ ವಿರುದ್ಧ ನಾನು ಖಾಸಗಿ ದೂರನ್ನು ಸಹ ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಮತ್ತು ವಕೀಲರ ಮೂಲಕ ನೋಟೀಸನ್ನು ಸಹ ಕಳುಹಿಸಿರುವುದಿಲ್ಲ. ಈ ದಾವೆಯನ್ನು ಹಾಕುವ ಪೂರ್ವದಲ್ಲಿಯೂ ಸಹ ನಾನು ಪ್ರತಿವಾದಿಗಳಿಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ.

5 ನೇ ಪ್ರತಿವಾದಿಯು ನಿಪಿ.33 ರಂತೆ 1 ನೇ ಪ್ರತಿವಾದಿಯಿಂದ ಖರೀದಿಸಿದ ಆಸ್ತಿಯಲ್ಲಿ 5 ನೇ ಪ್ರತಿವಾದಿಯು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. 5 ನೇ ಪ್ರತಿವಾದಿಯು 1 ನೇ ಪ್ರತಿವಾದಿಯಿಂದ ದಾವಾ ಆಸ್ತಿಯನ್ನು ಖರೀದಿಸಿದ ದಿನದಿಂದ ಕಾನೂನುಬದ್ಧವಾಗಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ನನ್ನ ಆಸ್ತಿಯೇ ಬೇರೆ, 1 ನೇ ಪ್ರತಿವಾದಿ 5 ನೇ ಪ್ರತಿವಾದಿಗೆ ಮಾರಾಟ ಮಾಡಿದ ಆಸ್ತಿಯೇ ಬೇರೆ ಎಂದರೆ ಸರಿ. ಸಾಕ್ಷಿ ಮುಂದುವರೆದು 1 ಮತ್ತು 5 ನೇ ಪ್ರತಿವಾದಿಯರು ನನ್ನ ಆಸ್ತಿಗೆ ಸ್ವಾಧೀನವನ್ನು ಕೇಳಿ ಬಂದಿರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿ ನನಗೆ ಸೇರಿದ್ದಾಗಿರುವುದಿಲ್ಲ, ಎಂದಿಗೂ ನಾನು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯಿಂದ 5 ನೇ ಪ್ರತಿವಾದಿಯು ಖರೀದಿಸಿರುವ ದಾವಾ ಆಸ್ತಿಯು ನಾನು ಕಬಳಿಸುವ ಉದ್ದೇಶದಿಂದ ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆಯಾಗಲಿ ಅಥವಾ ದಾವಾ ಆಸ್ತಿಯ ಬಗ್ಗೆಯಾಗಲಿ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಸ್ವಾಧೀನದಲ್ಲಿ ಇದ್ದಂತಹ ದಾವಾ

ಆಸ್ತಿಯನ್ನು 5 ನೇ ಪ್ರತಿವಾದಿಗೆ ನಿಪಿ.33 ರಂತೆ ಮಾರಾಟ ಮಾಡಿ ಸ್ವಾಧೀನದಲ್ಲಿ ಹಸ್ತಾಂತರಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ, ನನ್ನ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು ಕಡೂರು.